# ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಅಧಿನಿಮಯದ ಅಪರಾಧಗಳ ವಿಶೇಷ ನ್ಯಾಯಾಲಯ ಮತ್ತು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಜಿಲ್ಲೆ, ರಾಯಚೂರು.

ಸ್ಪೇಷಲ್ .ಸಿ **ಸಂಖ್ಯೆಃ 367/2020**

ಪ್ರಾ.ಸಾ-09

ಚಾ.ಸಾ-07

ಸಾಕ್ಷಿದಾರರು ಕ್ರಮವಾಗಿ ಪ್ರಮಾಣ ವಚನ ಮಾಡಿದರು ದಿನಾಂಕ 07-12-2021.

| | |
|---|---|
| ಸಾಕ್ಷಿದಾರರ ಹೆಸರು | ನಸೀಮಾ |
| ಗಂಡನ ಹೆಸರು | ಹುಸೇನಸಾಬ |
| ವಯಸ್ಸು | 55 |
| ಉದ್ಯೋಗ | ಮನೆಕೆಲಸ |
| ವಾಸಸ್ಥಳ | ದೇವದುರ್ಗ |

**ಮುಖ್ಯ ವಿಚಾರಣೆ ಃ ಸಾರ್ವಜನಿಕ ಅಭಿಯೋಜಕ ರಾದ ಮಂಜುನಾಥ ರವರಿಂದ .**

ಚಾ.ಸಾ-**1** ರಿಂದ **6** ರವರ ಪರಿಚಯ ಇದೆ. ನಾವೆಲ್ಲ ಒಂದೆ ಓಣಿಯವರು. **1** ಮತ್ತು **2** ನೇ ಆರೋಪಿತರ ಪರಿಚಯ ಇದೆ. ಆರೋಪಿತರು ಸರ್ಕಾರಿ ಜಾಗೆಯಲ್ಲಿ ಮನೆ ಕಟ್ಟುತ್ತಿದ್ದರು. ಅಲ್ಲಿ ಒಂದು ಬೋರವೆಲ್ ಇತ್ತು. ಅದನ್ನು ಒಳಗೆ ಮಾಡಿಕೊಂಡು ಕಟ್ಟಡ ಕಟ್ಟಿಸುತ್ತಿದ್ದರು. ಅದಕ್ಕೆ ನಾವೆಲ್ಲ ತಕರಾರು ಮಾಡಿದೆವು.

**2.** ಒಂದು ವರ್ಷ **6** ತಿಂಗಳ ಹಿಂದೆ ಸಂಜೆ **4-00** ಗಂಟೆಗೆ ಆರೋಪಿತರು ಅಲ್ಲಿ ಕಟ್ಟಡ ಕಟ್ಟಲು ಬಂದಾಗ ನಾವೆಲ್ಲ ಬೇಡ ಎಂದು ಹೇಳಿದೆವು ಆಗ ಆರೋಪಿತರು ಹೋದರು ಆಗ ನಾವು ಕೂಡ ಮನೆಗೆ ಹೋದೆವು. ಅದೇ ದಿನ ಸಂಜೆ **5-6** ಗಂಟೆಯ ಸುಮಾರಿಗೆ ಚಾ.ಸಾ-**1** ರವರು ಚಾ.ಸಾ-**2** ರವ ರಮನೆಯ ಹತ್ತಿರ ಕುಳಿತಿದ್ದರು. ಆರೋಪಿತರು ಬಂದು ಚಾ.ಸಾ-**1** ರವರ ಕೂದಲು ಹಿಡಿದು ಎಳೆದು, ಮಾದಿಗ ಜಾತಿ ಸೂಳೆ ಎಂದು ಬೈದ ಹೊಡೆದರು. ನಾವು ಬಿಡಿಸಲು ಹೋದಾಗ ಅವರು ನಮಗೂ ಕೂಡ ಆರೋಪಿತರು ನಿಮ್ಮನ್ನು ಖಲಾಸ್ ಮಾಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿದರು. ನಡೆದ ಘಟನೆ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲು ಃ ಆರೋಪಿತರ ಪರವಾಗಿ ಶ್ರೀ ಎಮ್.ಜೆಡ್.ಪಿ ವಕೀಲರಿಂದ ಃ-**

ನನ್ನ ಮನೆಯಿಂದ 2 ಮನೆಯನ್ನು ದಾಟಿದ ಮೇಲೆ ಚಾ.ಸಾ-2 ರವರ ಮನೆ ಇದೆ. ನಾನು ಶಾಲೆಗೆ ಹೊಗಿಲ್ಲ. ಈ ದಿನ ನನ್ನನ್ನು ಚಾ.ಸಾ-1 ಈಕೆ ನ್ಯಾಯಾಲಯಕ್ಕೆ ಕರೆದುಕೊಂಡು ಬಂದ್ದಿದ್ದಾಳೆ ಎಂದರೆ ಸರಿಯಲ್ಲ. ಚಾ.ಸಾ-1 ಈ ದಿನ ನ್ಯಾಯಾಲಯಕ್ಕೆ ಬಂದಿದ್ದಾಳೆ. ಮಾರನೆ ದಿನ ಪೋಲಿಸರು ಸ್ಥಳಕ್ಕೆ ಬಂದಾಗ ನನ್ನ ಹೆಳಿಕೆಯನ್ನು ಬರೆದುಕೊಂಡಿದ್ದಾರೆ. ಒಂದು ವರ್ಷ 6 ತಿಂಗಳ ಹಿಂದೆ ಸಂಜೆ 4-00 ಗಂಟೆಗೆ ಆರೋಪಿತರು ಅಲ್ಲಿ ಕಟ್ಟಡ ಕಟ್ಟಲು ಬಂದಾಗ ನಾವೆಲ್ಲ ಬೇಡ ಎಂದು ಹೇಳಿದೆವು ಆಗ ಆರೋಪಿತರು ಹೋದರು ಆಗ ನಾವು ಕೂಡ ಮನೆಗೆ ಹೋದೆವು. ಅದೇ ದಿನ ಸಂಜೆ 5-6 ಗಂಟೆಯ ಸುಮಾರಿಗೆ ಚಾ.ಸಾ-1 ರವರು ಚಾ.ಸಾ-2 ರವ ರಮನೆಯ ಹತ್ತಿರ ಕುಳಿತಿದ್ದರು. ಆರೋಪಿತರು ಬಂದು ಚಾ.ಸಾ-1 ರವರ ಕೂದಲು ಹಿಡಿದು ಎಳೆದು, ಮಾದಿಗ ಜಾತಿ ಸೂಳೆ ಎಂದು ಬೈದ ಹೊಡೆದರು ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಬಿಡಿಸಲು ಹೋದಾಗ ಅವರು ನಮಗೂ ಕೂಡ ಆರೋಪಿತರು ನಿಮ್ಮನ್ನು ಖಲಾಸ್ ಮಾಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿದರು ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ ಚಾ.ಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತ ಉಲ್ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು)
ಓ. ಹೇ. ಕೇ. ಸರಿ ಇದೆ.

1ನೇ ಹೆಚುವ್ಚರಿ ಸತ್ರ ನ್ಯಾಯಾಧೀಶರು,
ರಾಯಚೂರು.